# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 145 |
| ಸದಸ್ಯರ ಹೆಸರು | : | ಶ್ರೀ ರಘುನಾಥ್ ರಾವ್ ಮಲ್ಕಾಪೂರೆ |
| ಉತ್ತರಿಸಬೇಕಾದ ದಿನಾಂಕ | : | 10-12-2018 |
| ಉತ್ತರಿಸುವ ಸಚಿವರು | : | ಕೃಷಿ ಸಚಿವರು |

| ಪ್ರಶ್ನೆ | ಉತ್ತರ |
|---|---|
| ಅ) ಬೀದರ್ ಜಿಲ್ಲೆಯಲ್ಲಿ ಯಾವ ಯಾವ ಬೆಳೆಗಳಿಗೆ ವಿಮೆ ಮಾಡಿಸಲು ಅವಕಾಶವಿದೆ:ಯಾವ ಬೆಳೆಗಳಿಗೆ ಅವಕಾಶವಿರುವುದಿಲ್ಲ:ಬೆಳೆ ವಿಮೆಯನ್ನು ಯಾವ ಅವಧಿಯಿಂದ ರೈತರಿಗೆ ನೀಡಲು ಅನುಕೂಲ ಕಲ್ಪಿಸಲಾಗಿರುತ್ತದೆ; (ತಾಲ್ಲೂಕುವಾರು ಮಾಹಿತಿ ನೀಡುವುದು) | ಕರ್ನಾಟಕ ರೈತ ಸುರಕ್ಷಾ ಫಸಲ್ ಬಿಮಾ ಯೋಜನೆ (PMFBY)<br><br>– ಬೀದರ್ ಜಿಲ್ಲೆಯಲ್ಲಿ 2018-19 ನೇ ಸಾಲಿನ ಮುಂಗಾರು ಹಂಗಾಮಿಗೆ ಕೆಳಕಂಡ ಬೆಳೆಗಳಿಗೆ ವಿಮೆ ಮಾಡಿಸಲು ಅವಕಾಶವಿದೆ.<br><br>ಗ್ರಾಮ ಪಂಚಾಯತಿ ಮಟ್ಟಕ್ಕೆ ಎರಡು ಬೆಳೆಗಳು- ತೊಗರಿ(ಮಳೆಯಾಶ್ರಿತ), ಸೋಯಾ ಅವರೆ(ಮಳೆಯಾಶ್ರಿತ)<br><br>ಹೋಬಳಿ ಮಟ್ಟಕ್ಕೆ 11 ಬೆಳೆಗಳು-ಉದ್ದು(ಮಳೆಯಾಶ್ರಿತ), ಎಳ್ಳು (ಮಳೆಯಾಶ್ರಿತ), ಜೋಳ (ಮಳೆಯಾಶ್ರಿತ), ನೆಲಗಡಲೆ-ಶೇಂಗಾ(ಮಳೆಯಾಶ್ರಿತ), ಭತ್ತ(ನೀರಾವರಿ), ಭತ್ತ(ಮಳೆಯಾಶ್ರಿತ), ಮುಸುಕಿನ ಜೋಳ(ಮಳೆಯಾಶ್ರಿತ), ಸಜ್ಜೆ(ಮಳೆಯಾಶ್ರಿತ), ಸೂರ್ಯಕಾಂತಿ(ಮಳೆಯಾಶ್ರಿತ), ಸೋಯಾ ಅವರ (ನೀರಾವರಿ), ಹೆಸರು(ಮಳೆಯಾಶ್ರಿತ),<br><br>2018-19 ನೇ ಸಾಲಿನ ಹಿಂಗಾರು ಹಂಗಾಮಿಗೆ ಕೆಳಕಂಡ ಬೆಳೆಗಳಿಗೆ ವಿಮೆ ಮಾಡಿಸಲು ಅವಕಾಶವಿದೆ<br><br>ಗ್ರಾಮ ಪಂಚಾಯತಿ ಮಟ್ಟಕ್ಕೆ ಎರಡು ಬೆಳೆಗಳು- ಕಡಲೆ(ಮಳೆಯಾಶ್ರಿತ), ಜೋಳ (ಮಳೆಯಾಶ್ರಿತ)<br><br>ಹೋಬಳಿ ಮಟ್ಟಕ್ಕೆ ಏಳು ಬೆಳೆಗಳು-ಕಡಲೆ(ನೀರಾವರಿ), ಕುಸುಮೆ(ಮಳೆಯಾಶ್ರಿತ), ಗೋಧಿ(ಮಳೆಯಾಶ್ರಿತ), ಗೋಧಿ (ನೀರಾವರಿ), ಜೋಳ (ನೀರಾವರಿ), ಸೂರ್ಯಕಾಂತಿ(ನೀರಾವರಿ), ಸೂರ್ಯಕಾಂತಿ(ಮಳೆಯಾಶ್ರಿತ) ಬೆಳೆಗಳಿಗೆ ವಿಮೆ ಮಾಡಿಸಲು ಅವಕಾಶವಿರುವುತ್ತದೆ.<br><br>2018-19 ನೇ ಸಾಲಿನ ಬೇಸಿಗೆ ಹಂಗಾಮಿಗೆ-ಯಾವುದೇ ಬೆಳೆ ಅಧಿಸೂಚಿತವಾಗಿರುವುದಿಲ್ಲ.<br><br>– ಬೀದರ್ ಜಿಲ್ಲೆಯಲ್ಲಿ 2018-19 ನೇ ಸಾಲಿನ ಮುಂಗಾರು ಹಂಗಾಮಿಗೆ – ಏಪ್ರಿಲ್ ತಿಂಗಳಿನಿಂದ ಜುಲೈ ತಿಂಗಳಿನವರೆಗೆ ಹಾಗೂ ಹಿಂಗಾರು ಹಂಗಾಮಿಗೆ ಅಕ್ಟೋಬರ್‌ನಿಂದ ಡಿಸೆಂಬರ್ ತಿಂಗಳಿನವರೆಗೆ ಅಧಿಸೂಚಿತ ಬೆಳೆಗಳಿಗೆ ಬೆಳೆ ವಿಮೆಗಾಗಿ ನೋಂದಣಿ ಮಾಡಲು ಅವಕಾಶವಿರುತ್ತದೆ. ಹಾಗೆಯೇ ಅಧಿಸೂಚಿತ ಬೆಳೆಗಳ ಕಟಾವು ಪ್ರಯೋಗಗಳನ್ನು ಕೈಗೊಂಡು ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯಿಂದ ಇಳುವರಿ ಮಾಹಿತಿ ಬಂದ |

ನಂತರ ಅನುಷ್ಠಾನ ವಿಮಾ ಸಂಸ್ಥೆಗಳು ಬೆಳೆ ವಿಮೆ ಪರಿಹಾರದ ವಿತರಣೆ ಪ್ರಕ್ರಿಯೆಯನ್ನು ಪ್ರಾರಂಭಿಸುತ್ತವೆ.

- ರೈತರ ನೋಂದಣಿಗೆ ಬೆಳೆವಾರು ಕೊನೆಯ ದಿನಾಂಕಗಳು ಬೇರೆ ಬೇರೆಯಾಗಿರುತ್ತವೆ.
- ತಾಲ್ಲೂಕುವಾರು ಮಾಹಿತಿ ಅನುಬಂಧದಲ್ಲಿ ನೀಡಿದೆ

**ಮರು ವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆ (R-WBCIS)**

- ಬೀದರ್ ಜಿಲ್ಲೆಯ ಜಿಲ್ಲಾಮಟ್ಟದ ತಾಂತ್ರಿಕ ಸಮಿತಿಯಲ್ಲಿ ಗುರುತಿಸಲಾಗುವ ಜಿಲ್ಲೆಯ ಪ್ರಮುಖ ಬೆಳೆಗಳನ್ನು ರಾಜ್ಯ ಮಟ್ಟದ ಬೆಳೆವಿಮೆ ಸಮನ್ವಯ ಸಮಿತಿಯಲ್ಲಿ ಅನುಮೋದಿಸಿ ಅಧಿಸೂಚಿಸಲಾಗುತ್ತದೆ.
- 2018-19 ನೇ ಸಾಲಿನಲ್ಲಿ ಬೀದರ್ ಜಿಲ್ಲೆಗೆ ಮುಂಗಾರು ಹಂಗಾಮಿನಲ್ಲಿ ಹಸಿಮೆಣಸಿನಕಾಯಿ ನೀರಾವರಿ ಮತ್ತು ಹುರುಳಿ ಬೆಳೆಗಳನ್ನು ಅಧಿಸೂಚಿಸಿ ಬೆಳೆವಿಮೆಗೆ ನೋಂದಾಯಿಸಲು ದಿನಾಂಕ 30.06.2018ರವರೆಗೆ ಹಾಗೂ ಹಿಂಗಾರು ಹಂಗಾಮಿನಲ್ಲಿ ಮಾವು ಬೆಳೆಯನ್ನು ಅಧಿಸೂಚಿಸಿ ದಿನಾಂಕ:15.11.2018 ರವರೆಗೆ ನೋಂದಾಯಿಸಲು ರೈತರಿಗೆ ಅವಕಾಶ ಕಲ್ಪಿಸಲಾಗಿತ್ತು.

ಆ) ಸದರಿ ಭಾಗದ ರೈತರ ಪೈಕಿ ಎಷ್ಟು ರೈತರು ಬೆಳೆ ವಿಮೆ ಸೌಲಭ್ಯಗಳನ್ನು ಪಡೆದಿದ್ದಾರೆ; ಎಷ್ಟು ರೈತರು ಸೌಲಭ್ಯ ಪಡೆದಿರುವುದಿಲ್ಲ; (ವಿವರ ನೀಡುವುದು)

PMFBY

**ಬೀದರ್ ಜಿಲ್ಲೆಯಲ್ಲಿ ವಿಮಾ ಸೌಲಭ್ಯ ಪಡೆದ ರೈತರ ಸಂಖ್ಯೆ (ಮುಂಗಾರು ಮತ್ತು ಹಿಂಗಾರು ಹಂಗಾಮುಗಳಿಗೆ)**

| ವರ್ಷ | ನೋಂದಾಯಿತ ರೈತರ ಸಂಖ್ಯೆ | ವಿಮಾ ಪರಿಹಾರ ಪಡೆದ ಅರ್ಹ ರೈತರ ಸಂಖ್ಯೆ | ವಿಮಾ ಪರಿಹಾರ ಪಡೆಯದ ರೈತರ ಸಂಖ್ಯೆ |
|---|---|---|---|
| 2016-17 ಮುಂಗಾರು | 170765 | 134182 | 36583 |
| 2016-17 ಹಿಂಗಾರು | 56102 | 11671 | 44431 |
| 2017-18 ಮುಂಗಾರು | 321956 | 2144 | 319812 |
| 2017-18 ಹಿಂಗಾರು | 75 | 10 | 65 |
| 2018-19 ಮುಂಗಾರು | 180830 | ವಿಮಾ ಪರಿಹಾರ ಲೆಕ್ಕಾಚಾರ ಪ್ರಗತಿಯಲ್ಲಿರುತ್ತದೆ | |
| 2018-19 ಹಿಂಗಾರು | 10918 (As on 04.12.2018) ಹಾಗೂ ನೋಂದಣಿ ಪ್ರಗತಿಯಲ್ಲಿರುತ್ತದೆ. | | |

**R-WBCIS**

| ಬೀದರ್ ಜಿಲ್ಲೆಯಲ್ಲಿ ವಿಮಾ ಸೌಲಭ್ಯ ಪಡೆದರೈತರ ಸಂಖ್ಯೆ (ಮುಂಗಾರು ಮತ್ತು ಹಿಂಗಾರು ಹಂಗಾಮುಗಳಿಗೆ) | | | |
|---|---|---|---|
| ವರ್ಷ | ನೋಂದಾಯಿತ ರೈತರ ಸಂ | ವಿಮಾ ಪರಿಹಾರ ಪಡೆದ ಅರ್ಹರೈತರ ಸಂ. | ವಿಮಾ ಪರಿಹಾರ ಪಡೆಯದ ರೈತರ ಸಂಖ್ಯೆ |
| 2016-17 ಮುಂಗಾರು | 1127 | 1038 | 89 |
| 2016-17 ಹಿಂಗಾರು | – | – | – |
| 2017-18 ಮುಂಗಾರು | 37 | 32 | 5 |
| 2017-18 ಹಿಂಗಾರು | 3 | 3 | 0 |
| 2018-19 ಮುಂಗಾರು | 292 | ಮುಂಗಾರು ಮತ್ತು ಹಿಂಗಾರು ಹಂಗಾಮಿನ ಎಲ್ಲಾ ಅಧಿಸೂಚಿತ ಬೆಳೆಗಳಿಗೆ ನೋಂದಾಯಿಸಿದ ರೈತರುಗಳಿಗೆ ವಿಮಾ ಪರಿಹಾರ ಲೆಕ್ಕಾಚಾರ ಮಾಡಲು ಹವಾಮಾನ ಸೂಚ್ಯಂಕಗಳ ದತ್ತಾಂಶಗಳು ಅವಶ್ಯಕವಿದ್ದು, ಟರ್ಮ್‌ಶೀಟ್‌ಗಳ ಅವಧಿ ಪೂರ್ಣಗೊಂಡ ನಂತರ ಲೆಕ್ಕಾಚಾರ ಪ್ರಾರಂಭ ಮಾಡಲಾಗುವುದು. | |
| 2018-19 ಹಿಂಗಾರು | 55 | | |

ಇ) ಸದರಿ ಜಿಲ್ಲೆಯ ರೈತರ ಬೆಳೆಗೆ ಯೋಗ್ಯ ಬೆಲೆ ಸಿಗದಿದ್ದಾಗ ಮತ್ತು ಪ್ರಕೃತಿ ವಿಕೋಪಗಳಿಂದ ನಷ್ಟ ಉಂಟಾದಾಗ, ಬೆಳೆಗಾಗಿ ಮಾಡಿದ ಸಾಲ ಭಾದೆಗೆ ಒಳಗಾದವರನ್ನು ಈ ಬೆಳೆ ವಿಮೆ ವ್ಯಾಪ್ತಿಗೆ ಒಳಪಡಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ.

**PMFBY**

- ಬ್ಯಾಂಕ್ ಮತ್ತು ಸಹಕಾರ ಸಂಘಗಳಲ್ಲಿ ಅಧಿಸೂಚಿತ ಬೆಳೆಗೆ ಸಾಲ ಪಡೆದಿದ್ದಲ್ಲಿ, ಅಂತಹ ರೈತರು ಕಡ್ಡಾಯವಾಗಿ ಬೆಳೆ ವಿಮೆ ಯೋಜನೆಯಡಿ ನೋಂದಾಯಿತರಾಗಿರುತ್ತಾರೆ.
- ಸ್ಥಳ ನಿರ್ದಿಷ್ಟ ಪ್ರಕೃತಿ ವಿಕೋಪಗಳಾದ (Localized calamity), ಆಲೀಕಲ್ಲು ಮಳೆ, ಭೂಕುಸಿತ ಮತ್ತು ಬೆಳೆ ಮುಳುಗಡೆ(ಇನಂಡೇಷನ್) ಗಳಿಂದ ಉಂಟಾಗುವ ನಷ್ಟದ ನಿರ್ಧರಣೆಯನ್ನು ವೈಯುಕ್ತಿಕವಾಗಿ ನಿರ್ಧರಿಸಿ ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಲು ಹಾಗೂ ರಾಜ್ಯದ ಎಲ್ಲಾ ಜಿಲ್ಲೆಗಳನ್ನು ಅಳವಡಿದಿ ಅನುಷ್ಠಾನಗೊಳಿಸಲು ಅವಕಾಶವಿರುತ್ತದೆ. ಇಂತಹ ಸ್ಥಳೀಯ ಗಂಡಾಂತರಗಳ ಕಾರಣದಿಂದ ಬೆಳೆ ನಷ್ಟ ಸಂಭವಿಸಿದರೆ, ಬೆಳೆ ವಿಮೆ ಮಾಡಿಸಿರುವ ರೈತರು ಈ ಬಗ್ಗೆ ಸಂಬಂಧಪಟ್ಟ ಹಣಕಾಸು ಸಂಸ್ಥೆ ಅಥವಾ ಅನುಷ್ಠಾನಗೊಳಿಸುವ ವಿಮಾ ಸಂಸ್ಥೆಗಳ ಕಛೇರಿಗಳಿಗೆ ತಕ್ಷಣ ಸೂಚನೆ ನೀಡಬೇಕು ಮತ್ತು ಯಾವುದೇ ಸಂದರ್ಭದಲ್ಲಿ ವಿಮೆ ಮಾಡಿಸಿದ ಬೆಳೆಯ ವಿವರಗಳನ್ನು, ಹಾನಿಯ ವ್ಯಾಪ್ತಿ ಹಾಗೂ ಹಾನಿಗೆ ಕಾರಣಗಳನ್ನು 48 ಗಂಟೆಗಳೊಳಗಾಗಿ ತಿಳಿಸಬೇಕು. ನಷ್ಟದ ಬಗೆಗಿನ ಮಾಹಿತಿಯನ್ನು ಸ್ವೀಕರಿಸಿದ ಮೇಲೆ ವಿಮಾ ಸಂಸ್ಥೆಗಳು ಬೆಳೆ ನಷ್ಟವನ್ನು ನಿರ್ಧರಿಸುವುದಕ್ಕೆ ನಷ್ಟ ನಿರ್ಧಾರಕರನ್ನು ಸಂಬಂಧಪಟ್ಟ ಪ್ರದೇಶಕ್ಕೆ ನಿಯೋಜಿಸಿ, ಜಿಲ್ಲಾ ಕಂದಾಯ ಇಲಾಖೆ, ಕೃಷಿ ಹಾಗೂ ತೋಟಗಾರಿಕಾ ಇಲಾಖೆಯ ನೆರವಿನಿಂದ ಬೆಳೆ ನಷ್ಟದ ಪ್ರಮಾಣವನ್ನು ನಿರ್ಧರಿಸುತ್ತವೆ.
- ಮಳೆ ಅಭಾವ ಅಥವಾ ಇತರೆ ಪ್ರತಿಕೂಲ ಹವಾಮಾನ ಪರಿಸ್ಥಿತಿಗಳಿಂದ ಅಧಿಸೂಚಿತ ಘಟಕದಲ್ಲಿ ಶೇಕಡ 75 ಕ್ಕಿಂತ ಹೆಚ್ಚಿನ ಕ್ಷೇತ್ರದಲ್ಲಿ ಬಿತ್ತನೆ ವಿಫಲಗೊಂಡಲ್ಲಿ (Prevented sowing/Planting risk) ವಿಮಾ ಮೊತ್ತದ ಗರಿಷ್ಟ ಶೇಕಡಾ 25 ರಷ್ಟು ಪರಿಹಾರವನ್ನು ವಿಮ ಸಂಸ್ಥೆಯು ವಿಮೆ

ಮಾಡಿಸಿದ ರೈತರಿಗೆ ಇತ್ಯರ್ಥಪಡಿಸುತ್ತದೆ. ಮುಂದಿನ ಅವಧಿಗೆ ವಿಮೆಯನ್ನು ರದ್ದುಪಡಿಸಲಾಗುತ್ತದೆ. ಈ ಸಂಬಂಧ ಬಿತ್ತನೆ ಕ್ಷೇತ್ರದ ವರದಿಯನ್ನು ಘೋಷಿಸಲು ಹಾಗೂ ಮಳೆ ಮತ್ತು ಇತರೆ ಕೃಷಿ ಹವಾಮಾನದ ವರದಿಯನ್ನು ನೀಡಲು ನೀಡಲು ಜಿಲ್ಲೆಗಳ ಜಿಲ್ಲಾಧಿಕಾರಿಯವರನ್ನು ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಲಾಗಿದೆ. ಇಂತಹ ಸಂದರ್ಭಗಳು ಉದ್ಭವವಾದಲ್ಲಿ ಜಿಲ್ಲೆಗಳಿಂದ ವರದಿಗಳನ್ನು Prevented sowing/Planting risk ಮಾಡುವ ಕೊನೆಯ ದಿನಾಂಕದ ಒಂದು ವಾರ ಮುಂಚಿತವಾಗಿ ಕೃಷಿ ಇಲಾಖೆ ಕೇಂದ್ರ ಕಛೇರಿಗೆ ಸಲ್ಲಿಸಬೇಕಾಗಿರುತ್ತದೆ.

- ಅಧಿಸೂಚಿತ ಘಟಕದಲ್ಲಿ ಸಂಭವಿಸುವ ಹವಾಮಾನ ವೈಪರಿತ್ಯಗಳಾದ ಹೆಚ್ಚಿನ ಮಳೆ, ನೆರೆ/ಪ್ರವಾಹಗಳಿಂದ ಬೆಳೆ ಮುಳುಗಡೆ, ದೀರ್ಘಕಾಲದ ತೇವಾಂಶ ಕೊರತೆ(Prolonged dry spell) ತೀವ್ರ ಬರಗಾಲ ಮುಂತಾದುವುಗಳಿಂದ ಯಾವುದೇ ಅಧಿಸೂಚಿತ ವಿಮಾ ಘಟಕದಲ್ಲಿ ಬಿತ್ತನೆಯಾದ ನಂತರ ಕಟಾವಿಗೆ ಮೊದಲು (On- Account payment due to Mid Season Adversity), ನಿರೀಕ್ಷಿತ ಇಳುವರಿಯ ಶೇಕಡಾ 50 ಕ್ಕಿಂತ ಕಡಿಮೆ ಇದ್ದರೆ, ವಿಮೆ ಮಾಡಿಸಿದ ರೈತರಿಗೆ ಅಂದಾಜು ಮಾಡಲಾದ **ಬೆಳೆ** ವಿಮಾ ನಷ್ಟ ಪರಿಹಾರದಲ್ಲಿ ಶೇಕಡಾ 25 ರಷ್ಟು ಹಣವನ್ನು ಮುಂಚಿತವಾಗಿ ವಿಮಾ ಸಂಸ್ಥೆಯು ನೀಡುತ್ತದೆ. ನಂತರ, ಅಂತಿಮ ಬೆಳೆ ವಿಮಾ ನಷ್ಟ ಪರಿಹಾರದಲ್ಲಿ ಬೆಳೆ ಕಟಾವು ಪ್ರಯೋಗಗಳ ಆಧಾರದ ಮೇಲೆ ಬೆಳೆ ಇಳುವರಿ ಮಾಹಿತಿ ಬಂದನಂತರ ಈ ಪರಿಹಾರ ಮೊತ್ತವನ್ನು ಹೊಂದಾಣಿಕೆ ಮಾಡಲಾಗುತ್ತದೆ. ಈ ಬಗ್ಗೆ ವರದಿಯನ್ನು ನೀಡಲು ಜಿಲ್ಲೆಯ ಜಿಲ್ಲಾದಿಕಾರಿಯವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಲಾಗಿದೆ.

<u>R-WBCIS</u>

- ಹವಾಮಾನ ಆಧಾರಿತ ಬೆಳೆವಿಮೆ ಯೋಜನೆಯಡಿ, ಅಧಿಸೂಚಿಸಲಾದ ತೋಟಗಾರಿಕೆ ಬೆಳೆಗಳಿಗೆ ಹವಾಮಾನ ಸೂಚ್ಯಂಕಗಳನ್ನು ಆಧರಿಸಿ ಟರ್ಮ್ ಶೀಟ್‌ಗಳನ್ನು ತಯಾರಿಸಲಾಗಿರುತ್ತದೆ. ಆಯಾ ಸೂಚ್ಯಂಕಗಳ ಅನುಗುಣವಾಗಿ ಆಯಾ ಅವಧಿಗಳಿಗೆ ಹವಾಮಾನ ದತ್ತಾಂಶಗಳ ಪ್ರಕಾರ ವಿಮಾ ಪರಿಹಾರವನ್ನು ಲೆಕ್ಕ ಮಾಡಲಾಗುತ್ತದೆ ಜೊತೆಗೆ ಆಯಾಆರ್ಥಿಕ ವರ್ಷದ ಹಂಗಾಮುಗಳಲ್ಲಿ ಸ್ಥಳ ನಿರ್ದಿಷ್ಟ ಪ್ರಕೃತಿ ವಿಕೋಪಗಳಾದ ಆಲಿಕಲ್ಲು ಮಳೆ (Hailstorm) ಮತ್ತು ಮೇಘ ಸ್ಫೋಟ (**Cloud Burst**) ಸಂದರ್ಭದಲ್ಲಿ ಬೆಳೆ ನಷ್ಟವುಂಟಾದರೆ ವೈಯಕ್ತಿಕ ನಷ್ಟದ ನಿರ್ಧರಣೆಗಾಗಿ ಜಿಲ್ಲೆಗಳು ಹಾಗೂ ಬೆಳೆಗಳನ್ನು ಮತ್ತು ಸಂಭವನೀಯ ಅವದಿಯನ್ನು ಅಧಿಸೂಚಿಸಲಾಗುತ್ತದೆ. ಇಂತಹ ಸ್ಥಳೀಯ ಗಂಡಾಂತರಗಳ ಕಾರಣದಿಂದ ಬೆಳೆ ನಷ್ಟ ಸಂಭವಿಸಿದರೆ, ಸದರಿಯೋಜನೆಯಡಿ **ಅಧಿಸೂಚಿತ** ವಿಮಾ ಘಟಕಗಳಲ್ಲಿ, ಅಧಿಸೂಚಿತ ತೋಟಗಾರಿಕೆ ಬೆಳೆಗಳಿಗೆ **ವಿಮೆ** ಮಾಡಿಸಿದ ರೈತರು ಈ ಬಗ್ಗೆ ಸಂಬಂಧಪಟ್ಟ ಹಣಕಾಸು ಸಂಸ್ಥೆ (**Bank**) ಅಥವಾ ಅನುಷ್ಠಾನಗೊಳಿಸುವ ವಿಮಾ ಸಂಸ್ಥೆಗಳ ಕಛೇರಿ**ಗಳಿಗೆ** ಯಾವುದೇ ಸಂದರ್ಭದಲ್ಲಿ ವಿಮೆ ಮಾಡಿಸಿದ ಬೆಳೆಯ ವಿವರಗಳನ್ನು, ಹಾನಿಯ ವ್ಯಾಪ್ತಿ ಹಾಗೂ ಹಾನಿಗೆ ಕಾರಣಗಳನ್ನು 72 ಗಂಟೆಗಳೊಳಗಾಗಿ **ತಿಳಿಸಬೇಕು**.
- ನಷ್ಟದ ಬಗೆಗಿನ ಮಾಹಿತಿಯನ್ನು ಸ್ವೀಕರಿಸಿದ ಮೇಲೆ **ವಿಮಾ** ಸಂಸ್ಥೆಗಳು ಪರಿಶೀಲಿಸಿ ನಿಯಾಮಾನುಸಾರ ಬೆಳೆ ನಷ್ಟವನ್ನು ಇತ್ಯಾರ್ಥಪಡಿಸುವರು.

| | |
|---|---|
| ಈ) ಈ ಜಿಲ್ಲಾ ರೈತರಿಗೂ ಬೆಳೆ ವಿಮೆ ಸೌಲಭ್ಯಗಳನ್ನು ನಿರಂತರವಾಗಿ ನೀಡಲು ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಂಡಿರುತ್ತದೆ. (ತಾಲ್ಲೂಕುವಾರು ಸಂಪೂರ್ಣ ಮಾಹಿತಿ ಒದಗಿಸುವುದು) | – ಜಿಲ್ಲೆಯ ರೈತರು, ಕರ್ನಾಟಕ ರೈತ ಸುರಕ್ಷಾ ಫಸಲ್ ಬಿಮಾ ಯೋಜನೆಯಡಿ ಪ್ರತಿ ವರ್ಷ ಹಂಗಾಮುವಾರು ಅಧಿಸೂಚಿತ ಬೆಳೆಗಳಿಗೆ ವಿಮೆಗೆ ನೊಂದಾಯಿಸಿದಲ್ಲಿ, ಮಾರ್ಗಸೂಚಿಯನುಸಾರ ಹೋಬಳಿ/ಗ್ರಾಮ ಪಂಚಾಯತಿ ಮಟ್ಟದಲ್ಲಿ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯವರು ನೀಡುವ ಬೆಳೆ ಕಟಾವು ಪ್ರಯೋಗಗಳಿಂದ ಬಂದಂತಹ ವಾಸ್ತವಿಕ ಇಳುವರಿ ಮಾಹಿತಿಯು ನಿಗಧಿಪಡಿಸಲಾದ ಪ್ರಾರಂಭಿಕ ಇಳುವರಿಗಿಂತ ಕಡಿಮೆ ಇದ್ದರೆ, ಇಳುವರಿಯ ಕೊರತೆಗನುಗುಣವಾಗಿ ಹೋಬಳಿ/ಗ್ರಾಮ ಪಂಚಾಯತಿಯಲ್ಲಿ ಬೆಳೆ ವಿಮೆ ಮಾಡಿಸಿದ ಎಲ್ಲಾ ರೈತರು ಬೆಳೆ ವಿಮಾ ನಷ್ಟ ಪರಿಹಾರ ಪಡೆಯಲು ಅರ್ಹರಾಗುತ್ತಾರೆ.<br>– ಈ ಯೋಜನೆಯ ಕುರಿತು ರೈತರಿಗೆ ಮಾಹಿತಿ ನೀಡಿ ಪ್ರೋತ್ಸಾಹಿಸಲು ಸ್ಥಳೀಯ ಮತ್ತು ರಾಜ್ಯ ಪ್ರಮುಖ ದಿನಪತ್ರಿಕೆಗಳಲ್ಲಿ ಜಾಹಿರಾತು ನೀಡುವ ಮುಖೇನ, ಭಿತ್ತಿಪತ್ರಗಳು ಮತ್ತು ಕರಪತ್ರಗಳ ಮೂಲಕ ಮತ್ತು ಎಲ್ಲಾ ತಾಲ್ಲೂಕು. ಹೋಬಳಿ ಮತ್ತು ಗ್ರಾಮ ಪಂಚಾಯತಿಗಳಲ್ಲಿ ನಡಸಲಾಗುವ ಕೃಷಿ ಅಭಿಯಾನ ಕಾರ್ಯಕ್ರಮದ ಮೂಲಕ, ಜನಸ್ಪಂದನ ಮತ್ತು ಗ್ರಾಮಸಭೆಗಳಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಅಲ್ಲದೇ, ಜಿಲ್ಲಾ, ತಾಲ್ಲೂಕು ಕೃಷಿ ಮತ್ತು ತೋಟಗಾರಿಕೆ ಕಛೇರಿಗಳು ಮತ್ತು ರೈತ ಸಂಪರ್ಕ ಕೇಂದ್ರಗಳಿಗೆ ಭೇಟಿ ನೀಡುವ ರೈತರಿಗೆ ಯೋಜನೆಯ ಕುರಿತು ಮಾಹಿತಿ ನೀಡಿ ಪ್ರೋತ್ಸಾಹಿಸಲಾಗುತ್ತಿದೆ.<br>– ಸದರಿ ಯೋಜನೆಯ ಅನುಷ್ಠಾನದ ಮಾರ್ಗಸೂಚಿ, ಅಧಿಸೂಚನೆ ಇತ್ಯಾದಿ ವಿವರಗಳನ್ನು ಸಂರಕ್ಷಣೆ ತಂತ್ರಾಂಶದಲ್ಲಿ ಪ್ರಕಟಿಸಲಾಗುತ್ತಿದ್ದು, ಇದರ ಮುಖೇನವೂ ಸಹ ರೈತರಿಗೆ ಮಾಹಿತಿ ನೀಡಲಾಗುತ್ತಿದೆ.<br>**R-WBCIS**<br>– ಜಿಲ್ಲಾ ರೈತರುಗಳಿಗೆ ಬೆಳೆ ವಿಮೆ ಸೌಲಭ್ಯಗಳನ್ನು ನಿರಂತರವಾಗಿ ನೀಡಲು ಸರ್ಕಾರದ ವತಿಯಿಂದ ಪ್ರತಿ ಹಂಗಾಮುಗಳಲ್ಲಿ ಜಿಲ್ಲೆಯಲ್ಲಿ ಬೆಳೆಯುವ ಪ್ರಮುಖ ತೋಟಗಾರಿಕೆ ಬೆಳೆಗಳನ್ನು ಅಧಿಸೂಚಿಸಲಾಗುತ್ತಿದ್ದು, ಈ ಬಗ್ಗೆ ಪ್ರಚಾರಗಳನ್ನೂ ಸಹ ಕೈಗೊಳ್ಳುತ್ತಿದ್ದು, ರೈತರು ಆಯಾ ಹಂಗಾಮುಗಳಲ್ಲಿ ಸದರಿ ಯೋಜನೆಯ ಸದುಪಯೋಗ ಪಡೆಯ ಬಹುದಾಗಿರುತ್ತದೆ. |

**ಕೃಇ 105 ಕೃಕೈಲು 2018**

(ಎನ್.ಹೆಚ್.ಶಿವಶಂಕರ ರೆಡ್ಡಿ)

ಕೃಷಿ ಸಚಿವರು

ಅನುಬಂಧ LCQ 145

## 2018-19 ನೇ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ತಾಲ್ಲೂಕುವಾರು ಅಧಿಸೂಚಿತ ಬೆಳೆಗಳು

ಮುಂಗಾರು ಹಂಗಾಮು

| ಕ್ರಸಂ. | ತಾಲ್ಲೂಕ | ಗ್ರಾಮ ಪಂಚಾಯತಿ ಮಟ್ಟಕ್ಕೆ ಅಧಿಸೂಚಿತ ಬೆಳೆಗಳು | ಹೋಬಳಿ ಮಟ್ಟಕ್ಕೆ ಅಧಿಸೂಚಿತ ಬೆಳೆಗಳು |
|---|---|---|---|
| 1 | ಔರಾದ | ತೊಗರಿ (ಮಳೆಯಾಶ್ರಿತ), ಸೋಯಾ ಅವರೆ (ಮಳೆಯಾಶ್ರಿತ) | ಉದ್ದು (ಮಳೆಯಾಶ್ರಿತ), ಎಳ್ಳು(ಮಳೆಯಾಶ್ರಿತ), ಜೋಳ(ಮಳೆಯಾಶ್ರಿತ), ನೆಲಗಡಲೆ(ಶೇಂಗಾ) (ಮಳೆಯಾಶ್ರಿತ), , ಭತ್ತ(ಮಳೆಯಾಶ್ರಿತ), ಸಜ್ಜೆ(ಮಳೆಯಾಶ್ರಿತ), ಸೂರ್ಯಕಾಂತಿ(ಮಳೆಯಾಶ್ರಿತ), ಹೆಸರು(ಮಳೆಯಾಶ್ರಿತ), |
| 2 | ಬಸವ ಕಲ್ಯಾಣ | ತೊಗರಿ (ಮಳೆಯಾಶ್ರಿತ), ಸೋಯಾ ಅವರೆ (ಮಳೆಯಾಶ್ರಿತ) | ಉದ್ದು (ಮಳೆಯಾಶ್ರಿತ), ಎಳ್ಳು(ಮಳೆಯಾಶ್ರಿತ), , ಜೋಳ(ಮಳೆಯಾಶ್ರಿತ), ನೆಲಗಡಲೆ(ಶೇಂಗಾ) (ಮಳೆಯಾಶ್ರಿತ), ಭತ್ತ(ನೀರಾವರಿ), ಭತ್ತ(ಮಳೆಯಾಶ್ರಿತ), ಸಜ್ಜೆ(ಮಳೆಯಾಶ್ರಿತ), ಮುಸುಕಿನ ಜೋಳ(ಮಳೆಯಾಶ್ರಿತ), ಸೂರ್ಯಕಾಂತಿ(ಮಳೆಯಾಶ್ರಿತ), ಹೆಸರು(ಮಳೆಯಾಶ್ರಿತ), |
| 3 | ಬಾಲ್ಕಿ | ತೊಗರಿ (ಮಳೆಯಾಶ್ರಿತ), ಸೋಯಾ ಅವರೆ (ಮಳೆಯಾಶ್ರಿತ) | ಉದ್ದು (ಮಳೆಯಾಶ್ರಿತ), ಜೋಳ(ಮಳೆಯಾಶ್ರಿತ), ನೆಲಗಡಲೆ(ಶೇಂಗಾ) (ಮಳೆಯಾಶ್ರಿತ), , ಭತ್ತ(ಮಳೆಯಾಶ್ರಿತ), ಮುಸುಕಿನ ಜೋಳ(ಮಳೆಯಾಶ್ರಿತ), ಸೂರ್ಯಕಾಂತಿ(ಮಳೆಯಾಶ್ರಿತ), ಹೆಸರು(ಮಳೆಯಾಶ್ರಿತ), ಸೋಯಾ ಅವರೆ (ನೀ) |
| 4 | ಬೀದರ್ | ತೊಗರಿ (ಮಳೆಯಾಶ್ರಿತ), ಸೋಯಾ ಅವರೆ (ಮಳೆಯಾಶ್ರಿತ) | ಉದ್ದು (ಮಳೆಯಾಶ್ರಿತ), ಎಳ್ಳು(ಮಳೆಯಾಶ್ರಿತ), ಜೋಳ(ಮಳೆಯಾಶ್ರಿತ), ಭತ್ತ (ನೀ), ಭತ್ತ(ಮಳೆಯಾಶ್ರಿತ), ಮುಸುಕಿನ ಜೋಳ(ಮಳೆಯಾಶ್ರಿತ), ಸೂರ್ಯಕಾಂತಿ(ಮಳೆಯಾಶ್ರಿತ), ಹೆಸರು(ಮಳೆಯಾಶ್ರಿತ), |
| 5 | ಹುಮನಾಬಾದ | ತೊಗರಿ (ಮಳೆಯಾಶ್ರಿತ), ಸೋಯಾ ಅವರೆ (ಮಳೆಯಾಶ್ರಿತ) | ಉದ್ದು (ಮಳೆಯಾಶ್ರಿತ), ಎಳ್ಳು(ಮಳೆಯಾಶ್ರಿತ), ಜೋಳ(ಮಳೆಯಾಶ್ರಿತ), ಭತ್ತ(ನೀ), ಭತ್ತ(ಮಳೆಯಾಶ್ರಿತ), ಮುಸುಕಿನ ಜೋಳ (ಮಳೆಯಾಶ್ರಿತ) ಸಜ್ಜೆ(ಮಳೆಯಾಶ್ರಿತ), ಸೂರ್ಯಕಾಂತಿ(ಮಳೆಯಾಶ್ರಿತ), ಹೆಸರು(ಮಳೆಯಾಶ್ರಿತ), |
| 6 | ಚಿಟಗುಪ್ಪ | | ಉದ್ದು (ಮಳೆಯಾಶ್ರಿತ), ಎಳ್ಳು(ಮಳೆಯಾಶ್ರಿತ), , ಜೋಳ(ಮಳೆಯಾಶ್ರಿತ), ಭತ್ತ(ನೀರಾವರಿ), ಭತ್ತ(ಮಳೆಯಾಶ್ರಿತ), ಸಜ್ಜೆ(ಮಳೆಯಾಶ್ರಿತ), ಮುಸುಕಿನ ಜೋಳ(ಮಳೆಯಾಶ್ರಿತ), ಹೆಸರು(ಮಳೆಯಾಶ್ರಿತ), |

ಹಿಂಗಾರು ಹಂಗಾಮು

| ಕ್ರ.ಸಂ. | ತಾಲ್ಲೂಕ | ಗ್ರಾಮ ಪಂಚಾಯತಿ ಮಟ್ಟಕ್ಕೆ ಅಧಿಸೂಚಿತ ಬೆಳೆಗಳು | ಹೋಬಳಿ ಮಟ್ಟಕ್ಕೆ ಅಧಿಸೂಚಿತ ಬೆಳೆಗಳು |
|---|---|---|---|
| 1 | ಔರಾದ | ಕಡಲೆ (ಮಳೆಯಾಶ್ರಿತ), ಜೋಳ (ಮಳೆಯಾಶ್ರಿತ) | ಕಡಲೆ(ನೀರಾವರಿ), ಕುಸುಮೆ(ಮಳೆಯಾಶ್ರಿತ), ಗೋಧಿ(ಮಳೆಯಾಶ್ರಿತ), ಗೋಧಿ (ನೀರಾವರಿ), ಜೋಳ (ನೀರಾವರಿ), ಸೂರ್ಯಕಾಂತಿ(ಮಳೆಯಾಶ್ರಿತ) |
| 2 | ಬಸವ ಕಲ್ಯಾಣ | ಕಡಲೆ (ಮಳೆಯಾಶ್ರಿತ), ಜೋಳ (ಮಳೆಯಾಶ್ರಿತ) | ಕಡಲೆ(ನೀರಾವರಿ), ಕುಸುಮೆ(ಮಳೆಯಾಶ್ರಿತ), ಗೋಧಿ(ಮಳೆಯಾಶ್ರಿತ), ಗೋಧಿ (ನೀರಾವರಿ), ಸೂರ್ಯಕಾಂತಿ(ನೀರಾವರಿ), ಸೂರ್ಯಕಾಂತಿ(ಮಳೆಯಾಶ್ರಿತ) |
| 3 | ಬಾಲ್ಕಿ | ಕಡಲೆ (ಮಳೆಯಾಶ್ರಿತ), ಜೋಳ (ಮಳೆಯಾಶ್ರಿತ) | ಕಡಲೆ(ನೀರಾವರಿ), ಕುಸುಮೆ(ಮಳೆಯಾಶ್ರಿತ), ಗೋಧಿ(ಮಳೆಯಾಶ್ರಿತ), ಗೋಧಿ (ನೀರಾವರಿ), ಜೋಳ (ನೀರಾವರಿ) |
| 4 | ಬೀದರ್ | ಕಡಲೆ (ಮಳೆಯಾಶ್ರಿತ), ಜೋಳ (ಮಳೆಯಾಶ್ರಿತ) | ಕಡಲೆ(ನೀರಾವರಿ), ಕುಸುಮೆ(ಮಳೆಯಾಶ್ರಿತ), ಗೋಧಿ (ನೀರಾವರಿ), ಜೋಳ (ನೀರಾವರಿ), |
| 5 | ಹುಮನಾಬಾದ | ಕಡಲೆ (ಮಳೆಯಾಶ್ರಿತ), ಜೋಳ (ಮಳೆಯಾಶ್ರಿತ) | ಕಡಲೆ(ನೀರಾವರಿ), ಕುಸುಮೆ(ಮಳೆಯಾಶ್ರಿತ), ಗೋಧಿ (ನೀರಾವರಿ), ಜೋಳ (ನೀರಾವರಿ), |
| 6 | ಚಿಟಗುಪ್ಪ | | ಕುಸುಮೆ(ಮಳೆಯಾಶ್ರಿತ), ಗೋಧಿ (ನೀರಾವರಿ), ಜೋಳ (ನೀರಾವರಿ) |

ಬೀದರ್ ಜಿಲ್ಲೆಯಲ್ಲಿ 2018–19 ನೇ ಸಾಲಿನ ಬೇಸಿಗೆ ಹಂಗಾಮಿಗೆ–ಯಾವುದೇ ಬೆಳೆ ಅಧಿಸೂಚಿತವಾಗಿರುವುದಿಲ್ಲ.

ಕೃಷಿ ನಿರ್ದೇಶಕರು